**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಬಿ.ಕೆ.ಹರಿಪ್ರಸಾದ್ ಇವರು ನಿಯಮ 330 ರಡಿ ನೀಡಿರುವ ಗಮನ ಸೆಳೆಯುವ ಸೂಚನೆಗೆ ಮಾಹಿತಿ ನೀಡುವ ಬಗ್ಗೆ.**

## ಸೂಚನೆ

**ಉಡುಪಿ ಜಿಲ್ಲೆ ಮಲ್ಪೆಯ ಮಹಾಲಕ್ಷ್ಮೀ ಕೋ ಆಪರೇಟಿವ್ ಬ್ಯಾಂಕಿನಲ್ಲಿ ಗ್ರಾಹಕರು ಸಾಲ ಪಡೆದ್ದಾರೆ ಎನ್ನುವಂತೆ ನಕಲಿ ದಾಖಲೆಗಳನ್ನು ಸೃಷ್ಟಿಸಿ ಅಂದಾಜು 25 ಕೋಟಿಗೂ ಹೆಚ್ಚು ಅವ್ಯವಹಾರ ನಡೆಸಿರುವ ಪ್ರಕರಣದ ಬಗ್ಗೆ ನಿಯಮ 330ರ ಅಡಿ ಸದನದಲ್ಲಿ ಮಾನ್ಯ ಸಹಕಾರ ಸಚಿವರಲ್ಲಿ ಪ್ರಸ್ತಾಪಿಸ ಬಯಸುತ್ತೇನೆ.**

## ಉತ್ತರ

**ಮಹಾಲಕ್ಷ್ಮೀ ಕೋ ಆಪರೇಟಿವ್ ಬ್ಯಾಂಕ್, ಉಡುಪಿ:**

ಮಹಾಲಕ್ಷ್ಮೀ ಕೋ-ಆಪರೇಟಿವ್ ಬ್ಯಾಂಕ್ ನಿ. ಉಡುಪಿ ಇದರ 2014 ರಿಂದ 2023 ರವರೆಗೆ ಒಟ್ಟು 1413 ಸದಸ್ಯರಿಗೆ ತಲಾ ರೂ.2.00 ಲಕ್ಷದಂತೆ ಮೀನುಗಾರಿಕಾ ಸಾಲ/ವೈಯಕ್ತಿಕ ಸಾಲ ಎಂದು ವಿತರಿಸಿರುವುದರಲ್ಲಿ ಅವ್ಯವಹಾರವಾಗಿದೆ ಎಂಬ ಒಂದೇ ಆರೋಪದ ಬಗ್ಗೆ ಸಹಕಾರ ಸಂಘಗಳ ನಿಬಂಧಕರ ಕಛೇರಿಯಿಂದ ದಿನಾಂಕ:13-11-2024 ರಲ್ಲಿ ಸಹಕಾರ ಸಂಘಗಳ ಕಲಂ 64 ರಡಿ ವಿಚಾರಣೆ ನಡೆಸಿ ವರದಿ ಸಲ್ಲಿಸಲು ಸಹಕಾರ ಸಂಘಗಳ ಉಪನಿಬಂಧಕರು, ಉಡುಪಿ ಜಿಲ್ಲೆ ಇವರನ್ನು ನೇಮಿಸಲಾಗಿದೆ.

ಈ ಮಧ್ಯದಲ್ಲಿ ಸುಮಾರು 150 ಸದಸ್ಯರುಗಳು ಪ್ರತ್ಯೇಕ ದೂರನ್ನು ಕೇಂದ್ರ ಕಛೇರಿಗೆ ಸಲ್ಲಿಸಿರುವುದರಿಂದ ಸದರಿ ದೂರುಗಳನ್ನು ಸಹ ವಿಚಾರಣಾ ಸಮಯದಲ್ಲಿ ಪರಿಗಣಿಸಲು ಸೂಚಿಸಲಾಗಿದೆ. ಪ್ರಥಮ ಹಂತದಲ್ಲಿ ದಿನಾಂಕ:27-02-2025 ಮತ್ತು ದಿನಾಂಕ:28-02-2025 ರಂದು ಸುಮಾರು 125 ಬಾಧಿತ ದೂರುದಾರರ ಹೇಳಿಕೆಯನ್ನು ಪಡೆಯಲಾಗಿದೆ ಹಾಗೂ ದೂರುದಾರರ ವಿಳಾಸ ಇಲ್ಲದ ಇನ್ನೂ 50 ಸದಸ್ಯರಿಗೆ ಸ್ಥಳೀಯ ಪತ್ರಿಕೆಯಲ್ಲಿ ಬಹಿರಂಗ ವಿಚಾರಣಾ ನೋಟಿಸನ್ನು ನೀಡಿ ವಿಚಾರಣೆಯನ್ನು ದಿನಾಂಕ:11-3-2025 ರಂದು ನಿಗಧಿಪಡಿಸಲಾಗಿದೆ.

ಈ ಬ್ಯಾಂಕಿನ ಅವ್ಯವಹಾರದ ಸ್ವರೂಪ ಮತ್ತು ತೆಗೆದುಕೊಂಡಿರುವ ಕ್ರಮ ಈ ಕೆಳನಂತಿದೆ:

1) ಮಲ್ಪೆ ಶಾಖೆಯಿಂದ 2021 ರಲ್ಲಿಯೇ ಕೋವಿಡ್ ಸಾಂಕ್ರಾಮಿಕ ಕಾಯಿಲೆ ಉತ್ತುಂಗದಲ್ಲಿರುವ ಸಮಯದಲ್ಲಿ ಅತೀ ಹೆಚ್ಚು ರೂ.2-೦೦ ಲಕ್ಷಗಳ ಸಾಲ ನೀಡಿರುವುದು. ಆಗ ಮಲ್ಪೆ ಶಾಖೆಯ ವ್ಯವಸ್ಥಾಪಕರಾಗಿದ್ದ ಶ್ರೀ ಸುಬ್ಬಣ್ಣ ಎನ್ನುವವರಿಂದ ಈ ಅವ್ಯವಹಾರ ನಡೆಸಲಾಗಿದೆ.
2) ಮಲ್ಪೆ ಶಾಖೆಯ ವ್ಯಾಪ್ತಿಯಲ್ಲಿ ಬರುವ ಸ್ಥಳೀಯ ಸ್ತ್ರೀಶಕ್ತಿ/ಸ್ವಹಾಯ ಸಂಘಗಳ ಸದಸ್ಯರನ್ನೇ ಆಯ್ಕೆ ಮಾಡಿ ಅವರಿಗೆ ರೂ.2.0 ಲಕ್ಷಗಳ ಸಾಲ ವಿತರಿಸಲಾಗಿದೆ. ಹೆಚ್ಚಿನ ಸಾಲಗಾರರಿಗೆ ಅವರ ಮನೆಗಳಿಗೇ ಹೋಗಿ ಸುಬ್ಬಣ್ಣ ಮತ್ತು ಅವರು ನೇಮಿಸಿಕೊಂಡಿರುವ

ನಾಲ್ಕೈದು ಜನ ಏಜೆಂಟರುಗಳು ಖಾಲಿ ಪತ್ರಗಳು/ದಾಖಲೆಗಳ ಮೇಲೆ ಸಹಿ ಪಡೆದು ಸದಸ್ಯರುಗಳಿಗೆ ರೂ.10,000/- ರಿಂದ 1,05,500/- ಗಳ ವರೆಗೆ ವಿವಿಧ ಮೊತ್ತಗಳಲ್ಲಿ ಸಾಲವನ್ನು ಕೊಟ್ಟಿರುತ್ತಾರೆ.

3) ಇದುವರೆಗೆ ವಿಚಾರಣೆ ನಡೆಸಿರುವ ಶೇ.90 ಸದಸ್ಯರುಗಳು 10ನೇ ತರಗತಿ ಒಳಗೆ ವಿದ್ಯಾಭ್ಯಾಸ ಮಾಡಿದವರಾಗಿರುತ್ತಾರೆ. ಈ ಸಾಲಗಾರರಿಗೆ ಇದು ಸಬ್ಸಿಡಿ ಇರುವಂತಹ ಸಾಲ, ಮುಂದೆ ಮನ್ನಾ ಆಗುತ್ತದೆ ಎಂದು ಸುಳ್ಳು ಹೇಳಿ ಸಾಲ ನೀಡಲಾಗಿದೆ.

4) ಬ್ಯಾಂಕಿನಿಂದ ಹಾಜರುಪಡಿಸಿದ ತಃಖ್ತೆಗಳನುಸಾರ ರೂ.2.00 ಲಕ್ಷದಂತೆ ವಿತರಿಸಿದ ಸುಮಾರು 1378 ಸದಸ್ಯರ ಪೈಕಿ ಹಾಲಿ 755 ಪ್ರಕರಣಗಳು ಚಾಲ್ತಿಯಲ್ಲಿದ್ದು ದಿನಾಂಕ:27/28-2-2025 ರಂದು ನಡೆಸಿದ ದೂರುದಾರರ ವಿಚಾರಣೆಯಲ್ಲಿ ಕಂಡು ಬಂದ ಮೇಲಿನ ಅಂಶಗಳ ಮೇಲೆ ಉಳಿದ 600 ಸಾಲಗಾರರನ್ನೂ ವಿಚಾರಣೆಗೆ ಒಳಪಡಿಸಿ ಖಚಿತ ಮಾಹಿತಿ ಮತ್ತು ಅಂಕಿ ಅಂಶಗಳನ್ನು ಪಡೆಯಲು ತೀರ್ಮಾನಿಸಲಾಗಿದೆ.

5) ಒಟ್ಟು 600 ಸಾಲಗಾರರನ್ನು, ದಿನಾಂಕ:12-3-2025 ರಿಂದ 25-2-2025 ರವರೆಗೆ ವಿಚಾರಣೆ ನಡೆಸಿ ಕರಾರುವಕ್ಕಾದ ಅಂಕಿ ಅಂಶಗಳ ಸಮೇತ ವರದಿ ಸಿದ್ಧಪಡಿಸಲು ತೀರ್ಮಾನಿಸಲಾಗಿದೆ.

6) ವಿಚಾರಣಾ ಅವಧಿಯನ್ನು ವಿಸ್ತರಿಸಲೂ ಕೋರಿ ಪ್ರಸ್ತಾವೆ ಸ್ವೀಕೃತವಾಗಿರುತ್ತದೆ. ಬ್ಯಾಂಕಿನ ದಾಖಲೆಗಳು, ಎಲ್ಲಾ ಸಂಬಂಧಪಟ್ಟವರಿಂದ ಸಮಗ್ರ ಹೇಳಿಕೆ ಪಡೆದು ಏಪ್ರಿಲ್ 2025 ರ ಅಂತ್ಯದೊಳಗೆ ವರದಿ ನಿರೀಕ್ಷಿಸಿದ್ದು ವರದಿಯಂತೆ ನಿಯಮಾನುಸಾರ ಕ್ರಮವಿಡಲಾಗುವುದು

**ಸಂಖ್ಯೆ: ಸಿಒ 32 ಸಿಸಿಬಿ 2025**

K. N. Rajanna

**(ಕೆ.ಎನ್.ರಾಜಣ್ಣ)**
ಸಹಕಾರ ಸಚಿವರು